ದಿನಾಂಕ 06-08-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಎನ್.ಸಿ.ಆರ್., ವಕೀಲರಿಂದಃ-

11. ದಿನಾಂಕ 14.06.2018ರಂದು ನಿಪಿ-11ರಂತೆ ವಾದಿಗೆ ನೀವು ಲೆಟರ್ ಬರೆದಿದ್ದಿರಿ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಪಿ-11ನ್ನು ಸಾಕ್ಷಿಗೆ ತೋರಿಸಿ ಅದರಲ್ಲಿರುವ ಸಹಿ ನಿಮ್ಮದೇ, ನೀವೇ ಬರೆದಿರುವ ಲೆಟರ್ ಎಂದರೆ ಸಾಕ್ಷಿಯು ನಾನು ಬರೆದಿಲ್ಲ, ಸಹಿ ನನ್ನದಲ್ಲ ಎಂದು ನುಡಿಯುತ್ತಾರೆ. ನಿಪಿ-12 ಮತ್ತು ನಿಪಿ-13ರಂತೆ ನಿಪಿ-11 ಲೆಟರನ್ನು ಪೋಸ್ಟ್ ಮಾಡಿದ್ದೀರಿ ಎಂದರೆ ಸಾಕ್ಷಿಯು ದಾಖಲೆಗಳನ್ನು ನೋಡಿ ಅದರಲ್ಲಿ ನನಗೆ ಅನುಮಾನ ಇದೆ ಎಂದು ನುಡಿಯುತ್ತಾರೆ. ಆ ಪತ್ರ ಬರೆದು ವಾದಿಗೆ ಆರು ತಿಂಗಳು ಕಾಲಾವಕಾಶ ಕೇಳಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲೆಯ ದೃಢೀಕೃತ ಪ್ರತಿಯನ್ನು ತೋರಿಸಿ ಇದು ನೀವು ಓ.ಎಸ್.431/2011 ದಾವೆಯಲ್ಲಿ ಈ ಕೇಸಿನ ವಾದಿಯ ಪರವಾಗಿ ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣಪತ್ರ ಎಂದರೆ ಸಾಕ್ಷಿಯು ನಾನೇ ಸಲ್ಲಿಸಿದ್ದೇನೆ, ಅದರೆ ಪ್ರಕಾಶ್ ರವರು ನನ್ನ ಕೈಯಲ್ಲಿ ಆ ಸಾಕ್ಷಿ ಹೇಳಿಸಿದ್ದಾರೆ ಎಂದು ನುಡಿಯುತ್ತಾರೆ. ಅದನ್ನು ನಿಪಿ-23 ಎಂದು ಗುರುತಿಸಲಾಯಿತು. ನಿಪಿ-23ನ್ನು ದಿನಾಂಕ 08.01.2014ರಂದು ನ್ಯಾಯಾಲಯದಲ್ಲಿ ಸಲ್ಲಿಸಿದ್ದೇನೆ ಎಂದರೆ ಸಾಕ್ಷಿಯು ಸಲ್ಲಿಸಿದ್ದೇನೆ, ಆದರೆ ಪ್ರಕಾಶ್‌ರವರು ಸಾಕ್ಷಿ ಹೇಳಿಸಿದ್ದರು ಎಂದು ನುಡಿಯುತ್ತಾರೆ.

12. ನಿಪಿ-23 ಪ್ರಮಾಣಪತ್ರ ಸಲ್ಲಿಸುವ ಕಾಲಕ್ಕೆ ಈ ದಾವೆಯ ಅಗ್ರಿಮೆಂಟ್ ವ್ಯವಹಾರ ಆಗಿರಲಿಲ್ಲ ಎಂದರೆ ಸರಿ. ನಿಪಿ-23 ಪ್ರಮಾಣಪತ್ರ ಸಲ್ಲಿಸುವ ಕಾಲಕ್ಕೆ ವಾದಿಯ ಜೊತೆ ಆಗಿದ್ದ ಮೊದಲಿನ ಕರಾರು ಪತ್ರ ರದ್ದಾಗಿತ್ತು ಎಂದರೆ ಸರಿ. ಓ.ಎಸ್.13/2018 ದಾವೆ ಈ ದಾವೆಯ ವಾದಿಯ ಪರವಾಗಿ ಡಿಕ್ರಿಯಾಗಿದೆ ಎಂದರೆ ಮಾಹಿತಿ ಇಲ್ಲ. ಓ.ಎಸ್.13/2018ರ ದಾವೆಯ ಪ್ರತಿವಾದಿಗಳಾದ ಮಾರಕ್ಕ, ಕುಮಾರ್, ಶಂಕರ್ ರವರು ನನಗೆ ಸಂಬಂಧಿಕರಲ್ಲ. ಓ.ಎಸ್.13/2018

ದಾವೆಯ ವಿಚಾರ ನನಗೆ ಗೊತ್ತಾದದ್ದು ಈ ದಾವೆಯಲ್ಲಿ ನಾನು ನಮ್ಮ ವಕೀಲರ ಮುಖಾಂತರ ಹಾಜರಾದ ನಂತರ.

13. ಪ್ರಕಾಶ್‌ರವರು ವಾದಿಯ ಮುಖಾಂತರ ಬೇನಾಮಿ ವ್ಯವಹಾರ ಮಾಡುತ್ತಾರೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನಮ್ಮ ವಕೀಲರು ಹಾಜರುಪಡಿಸಿದ್ದಾರೆ ಎಂದು ನುಡಿಯುತ್ತಾರೆ. ಅವರು ಬೇನಾಮಿ ವ್ಯವಹಾರ ಮಾಡುತ್ತಾರೆಂದು ನಾನು ಪೊಲೀಸ್ ಠಾಣೆಗೆ ದೂರು ಕೊಟ್ಟಿಲ್ಲ. ಪ್ರಕಾಶ್‌ರವರು ವಾದಿಯ ಜೊತೆ ಸೇರಿ ಯಾವುದೇ ಬೇನಾಮಿ ವ್ಯವಹಾರ ಮಾಡುತ್ತಿಲ್ಲದ ಕಾರಣ ನೀವು ಯಾವುದೇ ದೂರು ಕೊಟ್ಟಿಲ್ಲ, ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಮಾಹಿತಿಯನ್ನು ವಕೀಲರು ತಲುಪಿಸಿದ್ದಾರೆ ಎಂದು ನುಡಿಯುತ್ತಾರೆ.

14. ದಾವಾ ಸ್ವತ್ತು ಬೆಂಗಳೂರು-ಮೈಸೂರು ಹೆದ್ದಾರಿಯಿಂದ 8 ರಿಂದ 10 ಕಿಲೋ ಮೀಟರ್ ದೂರದಲ್ಲಿದೆ. ಅಗ್ರಿಮೆಂಟ್ ಕಾಲಕ್ಕೆ ಬೆಂಗಳೂರು-ಮೈಸೂರು ಹೆದ್ದಾರಿ ಕಾಮಗಾರಿ ಪ್ರಾರಂಭವಾಗಿರಲಿಲ್ಲ ಎಂದೆ ಸರಿ. ಬೆಂಗಳೂರು-ಮೈಸೂರು ಹೆದ್ದಾರಿಯಾದ ನಂತರ ಅಕ್ಕಪಕ್ಕದ ಜಮೀನುಗಳ ಬೆಲೆ ಜಾಸ್ತಿಯಾಗಿದೆ ಎಂದರೆ ನನಗೆ ಮಾಹಿತಿ ಇಲ್ಲ. ನಮ್ಮ ಊರಿನಲ್ಲಿ ಕೆ.ಸಿ.ಶಿವರುದ್ರಯ್ಯರವರ ಮಗ ಕೆ.ಎಸ್.ರುದ್ರೇಶ್ ಎಂದರೆ ನಾನೊಬ್ಬನೇ. ಕೆ.ಎಸ್.ರುದ್ರೇಶ್‌ರವರ ಧರ್ಮಪತ್ನಿ ಉಷಾರಾಣಿ ಎಂಬುವವರು ನಮ್ಮ ಊರಿನಲ್ಲಿ ನನ್ನ ಪತ್ನಿ ಒಬ್ಬರೇ ಇರುವುದು ಎಂದರೆ ಸರಿ. ನಿಮ್ಮ ಮತ್ತು ನಿಮ್ಮ ಪತ್ನಿಯ ಹೆಸರಿಗೆ ಯಾವುದೇ ಅಂಚೆ ಪತ್ರಗಳು ಬಂದರೆ ನಿಮಗೆ, ನಿಮ್ಮ ಪತ್ನಿಗೆ ತಲುಪುತ್ತವೆ ಎಂದರೆ ಸಾಕ್ಷಿಯು ನಮ್ಮ ಊರಿನಲ್ಲಿ ಕೆ.ಎಸ್.ರುದ್ರೇಶ್ ಎಂಬುವವರು ಇಬ್ಬರಿದ್ದೇವೆ, ಆದ್ದರಿಂದ ಕೆಲವೊಮ್ಮೆ ತಪ್ಪಿ ಹೋಗುತ್ತವೆ ಎಂದು ನುಡಿಯುತ್ತಾರೆ.

15. ಓ.ಎಸ್.431/2011 ದಾವೆ ವೀರಣ್ಣರವರ ಪರವಾಗಿ ದಿನಾಂಕ

02.01.2015ರಂದು ಡಿಕ್ರಿಯಾಗಿದೆ ಎಂದರೆ ನನಗೆ ಮಾಹಿತಿ ಇಲ್ಲ. ಸರ್ವೆ ನಂ.196/1ಕ್ಕೆ 2010ರಲ್ಲಿ ರಸ್ತೆ ಸಂಪರ್ಕ ಇರಲಿಲ್ಲ ಎಂದರೆ ಸಾಕ್ಷಿಯು ಡಾಂಬರು ರಸ್ತೆ ಇತ್ತು ಎಂದು ನುಡಿಯುತ್ತಾರೆ. ನಿಡಿ-3ರಲ್ಲಿ ಪೂರ್ವಕ್ಕೆ ಪಿ.ಗಾಯತ್ರಿರವರ ಜಮೀನು ಎಂದು ಇದೆ ಎಂದರೆ ಸರಿ, ಪಶ್ಚಿಮಕ್ಕೆ ಸರ್ಕಾರಿ ಓಣಿ ಮತ್ತು ಚಂದ್ರಪ್ಪರವರ ಜಮೀನು ಇದೆ ಎಂದರೆ ಸರಿ, ಉತ್ತರಕ್ಕೆ ದೊಡ್ಡ ಯಡಿಯೂರಪ್ಪರವರ ಜಮೀನು ಇದೆ ಎಂದರೆ ಸರಿ, ದಕ್ಷಿಣಕ್ಕೆ ಸರ್ವೆ ನಂ.196/2ರ ಪಿ.ಗಾಯಿತ್ರಿರವರ ಜಮೀನು ಇದೆ ಎಂದರೆ ಸರಿ. ನಿಡಿ-3ರ ಸ್ವತ್ತಿಗೆ ರಸ್ತೆ ಸಂಪರ್ಕ ಇಲ್ಲ ಎಂಬ ಕಾರಣಕ್ಕೆ ವಾದಿಯವರು ಕರಾರು ಪತ್ರವನ್ನು ರದ್ದು ಮಾಡಿಕೊಂಡದ್ದು ಎಂದರೆ ಸರಿಯಲ್ಲ. ಪ್ರಸ್ತುತ ದಾವಾ ಸ್ವತ್ತಿನ ಪೂರ್ವಕ್ಕೆ ರಸ್ತೆ ಇದೆ ಎಂದರೆ ಸರಿಯಲ್ಲ.

16. ನಿಪಿ-2ರಲ್ಲಿ ಪೂರ್ವಕ್ಕೆ ಸರ್ಕಾರಿ ರಸ್ತೆ ಮತ್ತು ಸಿದ್ದವೀರಯ್ಯರವರ ಜಮೀನು ಎಂದು ಬರೆದಿದ ಎಂದರೆ ಸಾಕ್ಷಿಯು ಅದರಲ್ಲಿ ಬರೆದಿದೆ, ಆದರೆ ರಸ್ತೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ನಾನು ವಾದಿಗೆ 12,50,000/- ರೂಗಳಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಮುಂಗಡ ಹಣ ಆರು ಲಕ್ಷ ರೂಗಳನ್ನು ಚೆಕ್ ಮುಖಾಂತರ ವಾದಿಯಿಂದ ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿಯು ಆರು ಲಕ್ಷ ತೆಗೆದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ದಿನಾಂಕ 12.12.2016ರಂದು ವಾದಿಯನ್ನು ಭೇಟಿ ಮಾಡಿ ಕ್ರಯದ ಮೊಬಲಗು 14,50,000/- ರೂಗಳಿಗೆ ಹೆಚ್ಚಿಸಿದೆ ಎಂದರೆ ಸರಿಯಲ್ಲ. ವಾದಿ ಉಳಿಕೆ ಹಣ 5,000/- ರೂ ಪಾವತಿಸಲು ಸದಾ ಸಿದ್ದರಿದರು ಅದನ್ನು ನಿಮಗು ಸಹ ತಿಳಿಸಿದ್ದರು ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನೀವು ಬಾಕಿ ಹಣ ಪಡೆದುಕೊಂಡು ಕ್ರಯಪತ್ರ ಬರೆದುಕೊಟ್ಟಿಲ್ಲ ಎಂದರೆ ಸಾಕ್ಷಿಯು ನಾನು ಬಡ್ಡಿ ವ್ಯವಹಾರಕ್ಕೆ ಹಣ ತೆಗೆದುಕೊಂಡಿದ್ದೆ ಎಂದು ನುಡಿಯುತ್ತಾರೆ. ವಾದಿಯವರು ಬಲವಂತವಾಗಿ ನನ್ನ ಸಹಿ ಪಡೆದುಕೊಂಡಿದ್ದಾರೆ ಎಂದು ಇದುವರೆಗೂ ವಾದಿಯ ವಿರುದ್ದ ನಾನು ಪೊಲೀಸರಿಗೆ ಯಾವುದೇ ದೂರು ಕೊಟ್ಟಿಲ್ಲ. ವಾದಿಯಾಗಲೀ, ಪ್ರಕಾಶ್‌ರವರಾಗಲೀ ನನ್ನಿಂದ ಬಲವಂತವಾಗಿ ಸಹಿ

ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಮತ್ತು ಸರ್ವೆ ನಂ.196/1ನ್ನು ಬ್ಯಾಂಕಿನಲ್ಲಿ ಅಡಮಾನ ಮಾಡಿ ನೀವು ಸಾಲ ತೆಗೆದುಕೊಳ್ಳಬಹುದಾಗಿತ್ತು ಎಂದರೆ ಸಾಕ್ಷಿಯು ಏನೂ ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡಿದ್ದರೂ ಸಹ ಬೆಲೆ ಜಾಸ್ತಿಯಾಗಿರುವುದರಿಂದ ಸ್ವತ್ತನ್ನು ಮತ್ತೆ ಪಡೆದಕೊಳ್ಳಬೇಕೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.